**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.202/2021

**PW**. 4

**CW**. 7

**ಸಾಕ್ಷಿಯ ಹೆಸರು –ಕೀರ್ತಿ**

**ತಂದೆಯ ಹೆಸರು –ನಾಗರಾಜು**

**ವಯಸ್ಸು –28 ವರ್ಷಗಳು**

ದಿನಾಂಕ 10–12–2024 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ಖಾಸಗಿ ಕೆಲಸ**

**ವಾಸಸ್ಥಳ –ಹುಣಸೂರು**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಚಾಸಾ–1, 2 ಹಾಗೂ ಆರೋಪಿತರು ಗೊತ್ತು. ಚಾಸಾ–1, 2 ಹಾಗೂ ಆರೋಪಿತರ ನಡುವೆ ಆದ ಗಲಾಟೆ ನನಗೆ ತಿಳಿದುಬಂದಿಲ್ಲ. ಈಗ್ಗೆ 4–5 ವರ್ಷಗಳ ಹಿಂದೆ ಆರೋಪಿತರ ಮನೆ ಮುಂದೆ ಪೊಲೀಸರು ಒಂದು ಪಂಚನಾಮೆಗೆ ನನ್ನ ಸಹಿ ಪಡೆದರು. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ–2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–2(ಬಿ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಪೊಲೀಸರು ಫೋಟೋಗಳನ್ನು ತೆಗೆದಿರುತ್ತಾರೆ. ಅವುಗಳನ್ನು ಈಗಾಗಲೇ ನಿಪಿ–3 ರಿಂದ 6 ಎಂದು ಗುರುತಿಸಲಾಗಿದೆ. ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುಗಳನ್ನು ಜಪ್ತಿ ಮಾಡಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೇಳಿದ್ದು ಸಾಕ್ಷಿಯ ಸಾಕ್ಷ್ಯ ಮತ್ತು ಇತರೆ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)**

**SC No.202/2021**
**PW.4**

**ಪಾಟೀಸವಾಲುಃ– ಸರ್ಕಾರಿ ಅಭಿಯೋಜಕರಿಂದಃ–**

ಪಂಚನಾಮೆ ಕಾಲಕ್ಕೆ ಪೊಲೀಸರು ಸ್ಥಳದಲ್ಲಿ ರಕ್ತಸಿಕ್ತ ಮಣ್ಣು ಹಾಗೂ ಸಾದಾ ಮಣ್ಣನ್ನು ಜಪ್ತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ–2, ನಿಪಿ–3 ರಿಂದ 6 ರ ಫೋಟೋಗಳು , ರಕ್ತಸಿಕ್ತ ಮಣ್ಣು ಹಾಗೂ ಸಾದಾ ಮಣ್ಣಿನ ಬಗ್ಗೆ ಎಲ್ಲ ಮಾಹಿತಿ ಇದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರ ಸರಿಯಲ್ಲ.

**ಪಾಟೀಸವಾಲುಃ– ಆರೋಪಿತರ ಪರ ಶ್ರೀ ಆರ್ ಎಸ್ ಎಂ ವಕೀಲರಿಂದಃ–**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.